# 13

# “ಈಗಲೇ ಸಮಯ”

ರಕ್ಷಣೆಯ ಮೇಲಿನ ಅಧ್ಯಯನವು ಕೇವಲ ಬೌದ್ಧಿಕ ಪ್ರಯೋಗವಾಗಿರಬಾರದು. ಅದು ರಕ್ಷಣೆಯ ಕರ್ತನ ಕೊಡುಗೆಯನ್ನು ಸ್ವೀಕರಿಸಲು ಒಬ್ಬ ವ್ಯಕ್ತಿಯನ್ನು ನಡಿಸದಿದ್ದರೆ, ಅದು ತನ್ನ ಪೂರ್ಣ ಉದ್ದೇಶವನ್ನು ನೆರವೇರಿಸಿರುವದಿಲ್ಲ. ಯಾವುದೇ ರೀತಿಯಲ್ಲಿ ಅದು ಅವನನ್ನು ಬದಲಾಯಿಸದಿದ್ದರೆ ಅಧ್ಯಯನಕ್ಕಾಗಿ ಅವನು ಕಳೆದ ಸಮಯವು ವ್ಯರ್ಥವಾಗಿ ಹೋಗುತ್ತದೆ.

## ಸ್ವಯಂ - ಪರೀಕ್ಷೆಗಾಗಿ ಸಮಯ

ಈಗ ಸ್ವಯಂ ಪರೀಕ್ಷೆಗೆ ಸಮಯ. ನಿಮ್ಮ ಆತ್ಮದ ಅಗತ್ಯತೆಗಳನ್ನು ಕುರಿತು ನಿಮ್ಮ ಬಗ್ಗೆ ನೀವು ಬಹಳ ಯಥಾರ್ಥರಾಗಿರಬೇಕಾದ ಸಮಯವಾಗಿದೆ. ನಿಮ್ಮ ಆತ್ಮಿಕ ಅಗತ್ಯತೆಗಳು ಯಾವವೆಂದು ನಾನು ತೀರ್ಮಾಣಿಸಲಾರೆನು; ನೀವು ಮಾತ್ರವೇ ಅದನ್ನು ಮಾಡಬಹುದು. ದೇವರ ವಾಕ್ಯದ ಬೋಧನೆಗಳ ತಳಹದಿಯ ಮೇಲೆ ನೀವು ಅದನ್ನು ಮಾಡಬಹುದು.

ಮೊದಲು, ದೇವರನ್ನು, ಯೇಸುವನ್ನು, ಬೈಬಲನ್ನು  ನೀವು ನಿಜವಾಗಿಯೂ ನಂಬುವಿರೋ ಎಂದು ನಿಮ್ಮನ್ನೆ ಕೇಳಿಕೊಳ್ಳಿರಿ. ನಿಮಗೆ ಅನೇಕ ಸಂಶಯಗಳಿದ್ದರೆ, ಈ ಪುಸ್ತಕವನ್ನು ನಿಮಗೆ ಕೊಟ್ಟ ವ್ಯಕ್ತಿಗೆ ಹೇಳಿರಿ. ಮುಂದಿನ ಅಧ್ಯಯನದ ಬಗ್ಗೆ ವ್ಯವಸ್ಥೆ ಮಾಡಬಹುದು. ನೀವು ಬೈಬಲ್ ಓದುವದನ್ನು ಮುಂದುವರಿಸಿರಿ ಎಂದು ಒತ್ತಾಯ ಮಾಡುತ್ತೇವೆ. ಯಾಕಂದರೆ “ಕ್ರಿಸ್ತನ ವಾಕ್ಯದಿಂದ ... ವಿಶ್ವಾಸವು ಬರುತ್ತದೆ” (ರೋಮಾಪುರ 10:17; ನೋಡಿರಿ ಯೋಹಾನ 20:30, 31). ನೀವು ಯೇಸುವಿನಲ್ಲಿ ನಂಬಿಕೆಯಿಟ್ಟರೆ, ನೀವು ನಿಮ್ಮ ವಿಶ್ವಾಸವನ್ನು ಅರಿಕೆ ಮಾಡಲು ಸಿದ್ಧರಿರುವಿರೋ?

ನಿಮ್ಮ  ಪಾಪ ಭರಿತತೆಯನ್ನು, ತಪ್ಪಿಹೋದ ಪರಿಸ್ಥಿತಿಯನ್ನು ತಿಳಿದು ಕೊಂಡಿರುವಿರೋ? ದೇವರ ಸಹಾಯದಿಂದ ಉತ್ತಮ ಜೀವಿತ ಜೀವಿಸಲು ಸಮರ್ಪಣೆ ಮಾಡಿಕೊಳ್ಳಲು ಸಿದ್ಧರಿರುವಿರೋ?

ಈ ವಿಷಯಕ್ಕೆ “ಹೌದು” ಎಂದು ನೀವು ಉತ್ತರ ಕೊಟ್ಟರೆ, ಪರಿಶುದ್ಧ ಗ್ರಂಥಕ್ಕೆ ಅನುಗುಣವಾಗಿ ಬಾಪ್ತಿಸ್ಮ ಹೊಂದಿರುವಿರೋ ಎಂದು ನಿಮಗೆ ನೀವೆ ಪ್ರಶ್ನಿಸಿಕೊಳ್ಳಿರಿ, ಯಾವುದೇ ಆಚಾರದ ಮೂಲಕ ಇಲ್ಲವೇ “ಬಾಪ್ತಿಸ್ಮ” ಎಂಬ ಧರ್ಮಾಚರಣೆಯ ಮೂಲಕ ಹೋಗಿರುವುರೋ ಇಲ್ಲವೋ ಎಂಬುದು ಪ್ರಶ್ನೆಯಲ್ಲ, ಆದರೆ ಹೊಸ ಒಡಂಬಡಿ ಕೆಯು ಬೋಧಿಸುವಂತೆ ನೀವು ಬಾಪ್ತಿಸ್ಮ ಹೊಂದಿರುವಿರೋ ಇಲ್ಲವೇ ಎಂಬುದು. ಪೀಠಿಕೆಗೆ, ನೀವು ತುಂಬಿದ ಫಾರ್ಮಿಗೆ ಹಿಂದಿರುಗಿ ಹೋಗಿರಿ. ನೀವು ಬರೆದದ್ದನ್ನು ಬಾಪ್ತಿಸ್ಮದ ಬಗ್ಗೆ  ಬೈಬಲ್ ಬೋಧಿಸುವುದರೊಂದಿಗೆ ಹೋಲಿಸಿರಿ (4 ಮತ್ತು 5ನೆಯ ಪಾಠಗಳನ್ನು ಪುನರಾವರ್ತಿಸಿರಿ). ಬೈಬಲಿನಲ್ಲಿ ವಿವರಿಸಲ್ಪಟ್ಟಂತೆ ನಿಮ್ಮ ಬಾಪ್ತಿಸ್ಮವು ನಡಿಸಲ್ಪಟ್ಟಿರದಿದ್ದರೆ, ಬೈಬಲಿಗೆ ಅನುಗುಣವಾಗಿ ನೀವು ಪುನಃ ಬಾಪ್ತಿಸ್ಮ ಪಡೆಯಲು ನಿಶ್ಚಿತವಾಗಿ ಬಯಸಬಹುದು. ಈ ಪುಸ್ತಕವನ್ನು ಕೊಟ್ಟಿದವರೊಂದಿಗೆ ಮಾತನಾಡಿರಿ;

ಅವರು ಇದರ ವ್ಯವಸ್ಥೆ ಮಾಡಲು ನಿಮಗೆ ಸಹಾಯ ಮಾಡುವರು.

ನಿಮ್ಮ ಬಾಪ್ತಿಸ್ಮವು ಪರಿಶುದ್ಧ ಗ್ರಂಥಕ್ಕನುಗುಣವಾಗಿದ್ದರೆ, ನಿಮ್ಮ ಆರಾಧನೆಯ ಬಗ್ಗೆ ನೀವು ಪ್ರಶ್ನಿಸಬಹುದು. ಹೊಸ ಒಡಂಬಡಿಕೆಯಲ್ಲಿಯ ಸಭೆಯಂತಿರುವ ಸಭೆಯೊಂದಿಗೆ ನೀವು ಆರಾಧಿಸುತ್ತಿರುವಿರೋ ಹಾಗೂ ಸೇವೆ ಮಾಡುತ್ತಿರುವಿರೋ?

ಒಂದು ವೇಳೆ ನೀವು ಯಾವುದೇ ಧಾರ್ಮಿಕ ಸಂಸ್ಥೆಯೊಂದಿಗೆ ಸಂಬಂಧಿಸಿ ಕೊಂಡಿರದೇ ಇರಬಹುದು. ಹಾಗಿದ್ದರೆ, ನಿಮಗೆ ಸಮೀಪದಲ್ಲಿದ್ದ ಕ್ರಿಸ್ತನ ಸಭೆಯನ್ನು ಹುಡುಕಬೇಕೆಂದು ಒತ್ತಾಯ ಮಾಡುತ್ತೇನೆ. ಕ್ರಿಸ್ತನ ಸಭೆಯ ಸದಸ್ಯರು: "ಅವರನ್ನು ಪರೀಕ್ಷಿಸಲು" (1 ಯೋಹಾನ 4:1 ನೋಡಿರಿ) ನಿಮ್ಮನ್ನು ಪ್ರೋತ್ಸಾಹಿಸುವರು. ಈ ಪಾಠ ಗಳನ್ನು ಓದಲು ನಿಮ್ಮನ್ನು ಅಮಂತ್ರಿಸಿದವರು ಬಹುಶಃ ಕ್ರಿಸ್ತನ ಸಭೆಯ ಸದಸ್ಯರಾ ಗಿರಬಹುದು. ಹಾಗಿದ್ದರೆ ಅವನು ನಿಮ್ಮ ಪ್ರಶ್ನೆಗಳನ್ನು ಸ್ವಾಗತಿಸುವರು.

ಇನ್ನೊಂದು ಕಡೆಯಲ್ಲಿ, ಯಾವುದೇ ಒಂದು ಧಾರ್ಮಿಕ ಸಂಸ್ಥೆಗೆ ನೀವು ಸೇರಿ ಕೊಂಡಿದ್ದಿರ ಬಹುದು. ಹಾಗಿದ್ದರೆ, ಸಭೆಯ ಬಗ್ಗೆ ಹೊಸ ಒಡಂಬಡಿಕೆಯು ಏನು ಬೋಧಿಸುವುದೋ ಅದರ ಬೆಳಕಿನಲ್ಲಿ ಪರೀಕ್ಷಿಸುವ ಅಗತ್ಯತೆಯಿದೆ (6ರಿಂದ 11ರ ವರೆಗಿನ ಪಾಠಗಳನ್ನು ಪುನರಾವರ್ತಿಸಿರಿ). 11ನೆಯ ಪಾಠದಲ್ಲಿ ಹೇಳಿದ ವಿಧಾನವನ್ನು ಉಪಯೋಗಿಸಿರಿ. ನಿಮ್ಮ ಸಭೆಯು ಬೈಬಲ್ ವಿಧಾನಕ್ಕೆ ಹೊಂದಿ ಕೊಳ್ಳದಿದ್ದರೆ, ಆತ್ಮಿಕ ಮನೆಗಾಗಿ ಬೇರೆ ಕಡೆಯಲ್ಲಿ ನೋಡುವ ಅಗತ್ಯತೆಯಿದೆ.

## ವಿಧೇಯತೆಗಾಗಿ ಸಮಯ

ನೀವೇನು ಮಾಡಬೇಕೆಂಬುದನ್ನು ಒಮ್ಮೆ ನೀವು ಅರ್ಥಮಾಡಿಕೊಂಡ ಮೇಲೆ, ನೀವು ತಡಮಾಡ ಬಾರದೆಂಬುದು ಸ್ಪಷ್ಟವಾಗಿದೆ. ನೀವು ಕೂಡಲೇ ಕಾರ್ಯಮಾಡುವ ಅಗತ್ಯತೆಯಿದೆ. ನಾವು ನಮ್ಮ ಅಧ್ಯಯನವನ್ನು ಮುಕ್ತಾಯ ಗೊಳಿಸುವಂತೆ ನೀವು ಬೈಬಲಿನ ಮೂರು ವಾಕ್ಯಗಳನ್ನು ಯೋಚಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಮೊದಲನೆಯದು, ಯಾಕೋಬ 4:17, "ಹೀಗಿರುವದರಿಂದ ಒಳ್ಳೇದನ್ನು ಮಾಡಬೇಕೆಂದು ತಿಳಿದು ಅದನ್ನು ಮಾಡದೆ ಇರುವವನು ಪಾಪಕ್ಕೊಳಗಾಗಿದ್ದಾನೆ." "ಒಳ್ಳೆಯದನ್ನು ಮಾಡಬೇಕೆಂಬುದನ್ನು" ನೀವು ತಿಳಿದಿರುವಿರೋ? ನಿಮಗೆ ಬಾಪ್ತಿಸ್ಮ ಹೊಂದುವ ಅವಶ್ಯಕತೆಯು ತಿಳಿದಿರುವುದೋ? ನೀವು ಅದನ್ನು ತಿಳಿದಿದ್ದು, ಅದನ್ನು ಮಾಡದಿದ್ದರೆ ಅದು ಪಾಪವಾಗಿದೆ. ಕರ್ತನೊಂದಿಗೆ ಪುನಃ ಸ್ಥಾಪಿಸಿಕೊಳ್ಳಲು ನಿಮಗೆ ಅವಶ್ಯಕತೆಯಿದೆಯೋ? ನೀವು ಹಾಗೆ ಮಾಡದಿದ್ದರೆ ಅದು ಪಾಪವಾಗಿದೆ. ಧಾರ್ಮಿಕ ವಾಗಿ ನೀವು ಬದಲಾವಣೆ ಹೊಂದುವ ಅವಶ್ಯಕತೆ ನಿಮಗಿದೆಯೆಂದು ನೀವು ತಿಳಿದಿರು ವಿರೋ? ನೀವು ಮಾಡಬೇಕಾದದ್ದನ್ನು ಮಾಡುವದನ್ನು ತಿರಸ್ಕರಿಸಿದರೆ ಅದು ಪಾಪ ವಾಗಿದೆ.

ಎರಡನೆಯ ವಾಕ್ಯವು ಯೋಹಾನ 14:15. "ನೀವು ನನ್ನನ್ನು ಪ್ರೀತಿಸುವವರಾದರೆ ನನ್ನ ಆಜ್ಞೆಗಳನ್ನು ಕೃಕೊಂಡು ನಡೆಯುವಿರಿ" ಎಂದು ಯೇಸು ಹೇಳಿದನು. ನೀವು ಯೇಸುವನ್ನು ಪ್ರೀತಿಸಿದರೆ ಮತ್ತು ಬಾಪ್ತಿಸ್ಮ ಹೊಂದುವ ಅವಶ್ಯಕತೆ ನಿಮಗಿದ್ದರೆ ನೀವು ಬಾಪ್ತಿಸ್ಮ ಹೊಂದುವಿರಿ. ನೀವು ಯೇಸುವನ್ನು ಪ್ರೀತಿಸಿದರೆ ಮತ್ತು ನೀವು ಪುನಃ ಸ್ಥಾಪಿಸಲ್ಪಡುವ ಅವಶ್ಯಕತೆ ಇದ್ದರೆ ನೀವು ಪುನಃ ಸ್ಥಾಪನೆಗೊಳ್ಳುವಿರಿ. ನೀವು ಯೇಸುವನ್ನು ಪ್ರೀತಿಸಿದರೆ, ಧಾರ್ಮಿಕವಾಗಿ ನೀವು ಬದಲಾವಣೆ ಹೊಂದುವ ಅಗತ್ಯತೆಯಿದ್ದರೆ ನೀವು ಆ ಬದಲಾವಣೆ ಮಾಡುವಿರಿ.

ಮೂರನೆಯ ವಾಕ್ಯವು 2 ಕೊರಿಂಥಯ 6:2. "ಪ್ರಸನ್ನತೆಯ ಕಾಲದಲ್ಲಿ ನಿನ್ನ ಮನವಿಯನ್ನು ಕೇಳಿದೆನು. ರಕ್ಷಣೆಯ ದಿನದಲ್ಲಿ ನಿನಗೆ ಸಹಾಯ ಮಾಡಿದೆನು ಎಂದು ದೇವರು ಹೇಳುತ್ತಾನಲ್ಲಾ. ಈಗಲೇ ಆ ಸುಪ್ರಸನ್ನತೆಯ ಕಾಲ; ಇದೇ ಆ ರಕ್ಷಣೆಯ ದಿನ," ನೀವು ಏನು ಮಾಡಬೇಕೆಂಬುದನ್ನು ಒಮ್ಮೆ ನೀವು ಅರ್ಥಮಾಡಿಕೊಂಡ ಮೇಲೆ, ನೀವು ಅದನ್ನು ಮಾಡಿದ್ದರೆ ಮೂರು ಸಂಗತಿಗಳಲ್ಲಿ ಒಂದು ಸಂಭವಿಸಬಹುದು.

- ನೀವು ವಿಧೇಯರಾಗುವ ಮೊದಲು ಕರ್ತನು ಹಿಂದಿರುಗಿಬರಬಹುದು. "ನೀವು ನೆನಸದ ಗಳಿಗೆಯಲ್ಲಿ ಮನುಷ್ಯಕುಮಾರನು ಬರುತ್ತಾನೆ" (ಮತ್ತಾಯ 24:44). ಆದುದರಿಂದ ಆತನ ಹಿಂದಿರುಗಿ ಬರೋಣಕ್ಕೆ ನೀವು ಸಿದ್ಧ ರಾಗಿರಬೇಕೆಂದು ಸತ್ಯವೇದವು ಹೇಳುತ್ತದೆ. ದೇವರ ಚಿತ್ತವಿದ್ದರೆ ಆತನು ಇಂದೇ ಬರಬಹುದು.
- ನೀವು ವಿಧೇಯರಾಗುವ ಮೊದಲು ನೀವು ಸತ್ತು ಹೋಗಬಹುದು. ಯಾವುದೆ ಮನುಷ್ಯನಿಗೆ ಜೀವದ ಭರವಸೆಯಿರುವದಿಲ್ಲ. "... ಒಂದೇ ಸಾರಿ ಸಾಯುವದ ಆಮೇಲೆ ನ್ಯಾಯತೀರ್ಪೂ ಮನುಷ್ಯನಿಗೆ ನೇಮಕವಾಗಿದೆ" (ಇಬ್ರಿಯ 9:27).
- ನಿಮ್ಮ ಹೃದಯವು ಕಠಿಣವಾಗಿ ಹೋಗಬಹುದು. ಒಬ್ಬನು ಯೇಸುವಿನ ಆಮಂತ್ರಣವನ್ನು ತಿರಸ್ಕರಿಸುವ ಪ್ರತಿಯೊಂದು ಸಲವೂ ಅವನ ಹೃದಯವು ಕಠಿಣವಾಗುತ್ತ ಹೋಗಿ ಆತನನ್ನು ತಿರಸ್ಕರಿಸುವುದು ಸುಲಭವಾಗುತ್ತದೆ. ಮಾನಸಾಂತರಪಡಲು ಅಸಾಧ್ಯವಾಗುವಷ್ಟರ ಮಟ್ಟಿಗೆ ಒಬ್ಬ ವ್ಯಕ್ತಿಯು ಕಠಿಣವಾಗಿ ಹೋಗ ಬಹುದು (ಇಬ್ರಿಯ 6:4-6). "ನೀವು ಈ ಹೊತ್ತು ದೇವರ ಶಬ್ದಕ್ಕೆ ಕಿವಿಗೊಟ್ಟರೆ ನಿಮ್ಮ ಹೃದಯಗಳನ್ನು ಕಠಿಣ ಮಾಡಿಕೊಳ್ಳ ಬೇಡಿರಿ" ಎಂದು ಇಬ್ರಿಯ 4:7 ಒತ್ತಾಯ ಮಾಡುತ್ತದೆ.

## ಮುಕ್ತಾಯ

"ದೇವರ ಬಳಿಗೆ ಬರುವದಕ್ಕೆ" (ಇಬ್ರಿಯ 7:25; ಯಾಕೋಬ 4:8) ನೀವು ಏನು ಮಾಡತಕ್ಕದ್ದು ಎಂದು ನೀವು ತಿಳಿದು ಕೊಳ್ಳಲು ನಾವು ಒಂದಾಗಿ ಮಾಡಿದ ಅಧ್ಯಯನವು ನಿಮಗೆ ಸಹಾಯ ಮಾಡಿದೆಯೆಂದು ನಾನು ನಿರೀಕ್ಷಿಸುತ್ತೇನೆ. ಅದು ಹಾಗೆ ಮಾಡಿದ್ದರೆ ಏನು ಮಾಡತಕ್ಕದ್ದು ಎಂಬುದನ್ನು ನೀವು ತಿಳಿದುಕೊಂಡಿರುವದನ್ನು ನೀವು ತಡಮಾಡುವ ದಿಲ್ಲವೆಂದು ನಾನು ಪ್ರಾರ್ಥಿಸುತ್ತೇನೆ. ಈ ಪುಸ್ತಕವನ್ನು ನಿಮಗೆ ಕೊಟ್ಟವರೊಂದಿಗೆ ಮಾತನಾಡಿರಿ. ಈ ದಿನಕ್ಕಾಗಿ ಸಮಾಧಾನವನ್ನು ನಾಳೆಗಾಗಿ ನಿರೀಕ್ಷೆಯನ್ನು ನೀವು ಕಂಡುಕೊಳ್ಳಲು ನಿಮಗೆ ಸಹಾಯ ಮಾಡಲು ಅವರು ಕುತೂಹಲವುಳ್ಳವರಾಗಿರುವರು.

ಜೀವವೆಂಬ ಜಯಮಾಲೆಯನ್ನು ಸ್ವೀಕರಿಸುವದಕ್ಕಾಗಿ ನನಗೆ ಆಸಕ್ತಿಯುಳ್ಳ ಅಪೇಕ್ಷೆಯಿರುವುದು (ಪ್ರಕಟನೆ 2:10). ನಾನು ಪರಲೋಕಕ್ಕೆ ಹೋಗಲು ಬಯಸುವೆನು, ಅಲ್ಲಿ ದೇವರು "(ನಮ್ಮ) ಕಣ್ಣೀರನ್ನೆಲ್ಲಾ ಒರಸಿಬಿಡುವನು. ಇನ್ನು ಮರಣವಿರುವದಿಲ್ಲ, ಇನ್ನು ದುಃಖವಾಗಲಿ, ಗೋಳಾಟವಾಗಲಿ, ಕಷ್ಟವಾಗಲಿ ಇರುವದಿಲ್ಲ; (ಯಾಕಂದರೆ) ಮೊದಲಿದ್ದದ್ದೆಲ್ಲಾ ಇಲ್ಲದೆ ಹೋಯಿತು" (ಪ್ರಕಟನೆ 21:4). ನಾನು ಪ್ರೀತಿಸುವವರೆಲ್ಲರೂ

ಅಲ್ಲಿರಬೇಕೆಂದು ನಾನು ಪ್ರತಿದಿನವೂ ಪ್ರಾರ್ಥಿಸುತ್ತೇನೆ ನಿಮ್ಮನ್ನೂ ಅಲ್ಲಿ ನೋಡಲು ಬಯಸುತ್ತೇನೆ. ದೇವರು ನಿಮ್ಮನ್ನು ಆಶೀರ್ವದಿಸಲಿ.

© 2009 Truth for Today